**<u>ಕರ್ನಾಟಕ ವಿಧಾನ ಪರಿಷತ್ತು</u>**

**ದಿನಾಂಕ: ೦೫ನೇ ಜುಲೈ 2018**
**ಗುರುವಾರ**

**<u>ವಿಷಯಾನುಕ್ರಮಣಿಕೆ</u>**

**1, ವಿತ್ತೀಯ ಕಲಾಪ**

***2018-2019ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಒಪ್ಪಿಸುವುದು***

– ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು)

**2. ಪ್ರಕಟಣೆಗಳು**

~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 5ನೇ ಜುಲೈ 2018**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.**

**ಹಂಗಾಮಿ ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(091):05.07.2018/ 11:30/ ಎಂವಿ-ಕೆಎಸ್

1. **<u>ವಿತ್ತೀಯ ಕಾರ್ಯಕಲಾಪ</u>**

**<u>ಆಯವ್ಯಯ ಅಂದಾಜುಗಳನ್ನು ಒಪ್ಪಿಸುವುದು.</u>**

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ 2018-2019ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**(ಆಯವ್ಯಯ ಭಾಷಣದ ಕನ್ನಡ ಮತ್ತು ಆಂಗ್ಲ ಪ್ರತಿಗಳನ್ನು ಲಗತ್ತಿಸಲಾಗಿದೆ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## 2. ಪ್ರಕಟಣೆಗಳು

**ಸಭಾಪತಿಯವರು:–**

ಅ) ಮಹಿಳಾ ಸಬಲೀಕರಣ, ಮಹಿಳಾ ಸಾಕ್ಷರತೆ, ಸ್ವಚ್ಛ ಭಾರತ್ ಅಭಿಯಾನವನ್ನು ಸಮಾಜಕ್ಕೆ ಸಾರುವ, 2018–19ನೇ ಸಾಲಿನ ರಾಷ್ಟ್ರ ಪ್ರಶಸ್ತಿಗೆ ಪುರಸ್ಕೃತವಾಗಿರುವ "ಹೆಬ್ಬೆಟ್ಟು ರಾಮಕ್ಕ" ಎಂಬ ಮಹಿಳಾ ಪ್ರಧಾನ ಚಿತ್ರದಲ್ಲಿ ನಮ್ಮ ಸದನದ ಹಾಲಿ ಸದಸ್ಯರಾದ ಶ್ರೀಮತಿ ತಾರಾ ಅನೂರಾಧರವರು ನಟಿಸಿದ್ದು, ಸದರಿ ಚಲನ ಚಿತ್ರವನ್ನು ಬೆಂಗಳೂರು ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಈ ದಿನ ಸಂಜೆ 4:30 ಗಂಟೆಗೆ ಪ್ರದರ್ಶಿಸಲಾಗುತ್ತಿದೆ. ಈ ಮನೆಯ ಸದಸ್ಯರಾದ ಶ್ರೀಮತಿ ತಾರಾ ಅನೂರಾಧರವರು ಎಲ್ಲಾ ಮಾನ್ಯ ಶಾಸಕರುಗಳನ್ನು ಈ ಚಲನಚಿತ್ರ ವೀಕ್ಷಿಸಲು ಆಮಂತ್ರಣವನ್ನು ನೀಡಿರುತ್ತಾರೆ. ದಯಮಾಡಿ ಎಲ್ಲ ಸದಸ್ಯರುಗಳೂ ಮಾನ್ಯ ಸದಸ್ಯರ ಆಮಂತ್ರಣವನ್ನು ಸ್ವೀಕರಿಸಲು ಕೋರಲಾಗಿದೆ.

ಆ) ನಮ್ಮ ಸಹೋದರ ರಾಷ್ಟ್ರವಾದ ನೇಪಾಳಕ್ಕೆ "ಕೈಲಾಸ ಮಾನಸ ಸರೋವರ ಯಾತ್ರೆ"ಗೆ ತೆರಳಿರುವ ರಾಜ್ಯದ ಯಾತ್ರಿಕರುಗಳು ಪ್ರಕೃತಿ ವಿಕೋಪಕ್ಕೆ ಸಿಲುಕಿ, ತತ್ತರಿಸಿ ಕಾಣೆಯಾಗಿರುವ ಬಗ್ಗೆ ಈ ಸದನ ಗಂಭೀರ ಚಿಂತನೆ ನಡೆಸಿದೆ. ಆ ಯಾತ್ರಿಕರುಗಳನ್ನು ಗುರ್ತಿಸಿ, ಪತ್ತೆ ಹಚ್ಚಿ, ಸುರಕ್ಷಿತವಾಗಿ ನಮ್ಮ ರಾಜ್ಯಕ್ಕೆ ಮರಳಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಸದನದ ಮೂಲಕ ಸರ್ಕಾರವನ್ನು ವಿನಂತಿಸುತ್ತಿದ್ದೇನೆ. ಧಾರವಾಡದ 13 ಜನ ಯಾತ್ರಿಕರು ನಾಪತ್ತೆಯಾಗಿರುವುದಾಗಿ ಧಾರವಾಡದ ಶ್ರೀ ಶಿವನಗೌಡ ಪಾಟೀಲ್ ಎಂಬುವವರು ದೂರವಾಣಿ ಕರೆ ಮೂಲಕ ನನಗೆ ತಿಳಿಸಿದರು. ಆ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಈಗ ಸಭೆಯು ಮುಕ್ತಾಯವಾಗಿ ಪುನಃ ದಿನಾಂಕ 06ನೇ ಜುಲೈ ಮಾಹೆ 2018ರ ಶುಕ್ರವಾರದಂದು ಬೆಳಗ್ಗೆ 10:30 ಗಂಟೆಗೆ ಸೇರುವುದು.

**(ಸದನವು ಪೂರ್ವಾಹ್ನ 11 ಗಂಟೆ 39 ನಿಮಿಷಕ್ಕೆ ಮುಕ್ತಾಯಗೊಂಡು,<br>ಪುನಃ ದಿನಾಂಕ 06ನೇ ಜುಲೈ ಮಾಹೆ 2018ರ ಶುಕ್ರವಾರದಂದು<br>ಬೆಳಗ್ಗೆ 10:30 ಗಂಟೆಗೆ ಸೇರಲು ನಿಶ್ಚಯಿಸಿತು)**